ರೇಷ್ಮೆನಾಡು "27-12-19"

# ಕಂಕಣ ಸೂರ್ಯಗ್ರಹಣ ವೀಕ್ಷಣೆ



ಚಾಮರಾಜನಗರ.ಡಿ.೨೬. ಮೊಬಿಲಿಟಿ ಇಂಡಿಯಾ ಸಂಸ್ಥೆಯು ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಸುಮಾರು ೧೫ಕ್ಕೂ ಹೆಚ್ಚು ಶಾಲೆಗಳಲ್ಲಿ ಕಂಕಣ ಸೂರ್ಯಗ್ರಹಣದ ವೀಕ್ಷಣಾ ಕಾರ್ಯಕ್ರಮವನ್ನು ಆಯೋಜಿಸಿತ್ತು. ೪೫ ವರ್ಷಗಳ ನಂತರ ಸೌರಮಂಡಲ ದಲ್ಲಿ ಜರುಗುತ್ತಿರುವ ಈ ವಿದ್ಯಮಾನದ 'ಕುರಿತಾಗಿ ಜನಸಾಮಾನ್ಯರು ಹಾಗೂ ಮಕ್ಕಳಲ್ಲಿ ಇರುವ ಮೂಢನಂಬಿಕೆ ಯನ್ನುಹೋಗಲಾಡಿ ಸುವ ಆಶಯದೊಂದಿಗೆ 'ಕಾರ್ಯಕ್ರಮ ವನ್ನು ವಿವಿಧ ಶಾಲೆಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಶಿಕ್ಷಕರು, ಮಕ್ಕಳು ಹಾಗೂ ಸಮುದಾಯದ ಸದ್ಯಸರು ಭಾಗವಹಿಸಿ ಆಕಾಶದಲ್ಲಿನ ಈ ವಿಸ್ಮಯವನ್ನು ಕಣ್ತುಂಬಿಕೊಂಡರು. ಈ ಕಾರ್ಯಕ್ರಮದಲ್ಲಿ ವಿಕಲಚೇತನ ಮಕ್ಕಳು ಯಾವುದೇ ಅಳುಕು, ಹಿಂಜರಿಕೆ ಇಲ್ಲದೆಎಲ್ಲರಂತೆ ಭಾಗವಹಿಸಿ ಸೂರ್ಯ ಗ್ರಹಣವನ್ನು ವೀಕ್ಷಣೆ ಮಾಡಿಕಾರ್ಯಕ್ರಮಕ್ಕೆ ಇನ್ನೂ ಹೆಚ್ಚಿನ ಮೆರುಗುತಂದರು.

ಗ್ರಹಣದ ಸಮಯದಲ್ಲಿ ವಿಕಲಚೇತನ ಮಕ್ಕಳನ್ನು ಭೂಮಿಯೊಳಗೆ ಎದೆಯಮಟ್ಟಕ್ಕೆ ಹೂಳುವ ಅನಿಷ್ಠ ಪದ್ಧತಿಯ ಆಚರಣೆಯಲ್ಲಿ ಇರುವುದನ್ನ ನಾವು ವಿವಿಧ ಮಾಧ್ಯಮಗಳಲ್ಲಿ ಈ ಹಿಂದೆ ನೋಡಿದ್ದೇವೆ. ಆದರೆ ಇದ್ಯಾವುದರ ಬಗ್ಗೆಯೂ ತಲೆಕೆಡಿಸಿಕೊಳ್ಳದೆ ವಿಕಲಚೇತನ ಮಕ್ಕಳು ಶಿಕ್ಷಕರು ಮತ್ತು ತಮ್ಮ ಸ್ನೇಹಿತರಜೊತೆಗೂಡಿ ಕಂಕಣ ಸೂರ್ಯಗ್ರಹಣವನ್ನ ವೀಕ್ಷಣೆ ಮಾಡಿದರು. ಆ ಮೂಲಕ ಗ್ರಹಣವೆಂಬುದು ಆಕಾಶ ಕಾಯಗಳ ನೆರಳು ಬೆಳಕಿನ ಆಟ ಇದ ಜನಸಾಮಾನ್ಯರ ಮೇಲೆ ಯಾವುದೇರೀತಿಯಕೆಟ್ಟ ಪರಿಣಾಮವನ್ನ ಬೀರುವುದಿಲ್ಲವೆಂದು ಪ್ರಾಯೋಗಿಕವಾಗಿ ತೋರಿಸಿಕೊಟ್ಟರು. ಸಂಸ್ಥೆಯು ಒದಗಿಸಿದ್ದ ಸೌರ ಕನ್ನಡಕಗಳ ಮೂಲಕ ಶಿಕ್ಷಕರು, ಮಕ್ಕಳು ಹಾಗೂ ಸಮುದಾಯದ ಸದಸ್ಯರು ವೀಕ್ಷಣೆ ಮಾಡಿ ಸಂಭ್ರಮಿಸಿದರು.